ಖುಷಿಯಾಗಿರಿಸಲಿಕ್ಕೆ ದೊಡ್ಡ ಸಂಬಳವೇ ಕೈಸೇರಬೇಕಿಲ್ಲ. ತಿಂಗಳ ಕೊನೆಗೆ ಚಿಕ್ಕ ಮಲ್ಲಿಗೆ ಮಾಲೆಯ ಜೊತೆಗೆ ಬೊಗಸೆ ತಲುಪುವ ಸಣ್ಣ ಮೊತ್ತವಾದರೂ ಸಾಕು.''

ಯಾವ ಕೋನದಿಂದಲೂ ಅವಳ ಮಾತು ನಾಟಕೀಯವಾಗಿರುವಂತೆ ಕಾಣಲಿಲ್ಲ. ಅದೇಕೋ ಅವನ್ನು ಕೇಳಿಸಿಕೊಳ್ಳುವುದು ಹಿತವೆನಿಸಿತು. ಕೇಳುತ್ತಲೇ ಇರಬೇಕೆನಿಸುತ್ತಿರುವ ಈ ಸಂಭಾಷಣೆಯನ್ನು ಜಾರಿಯಲ್ಲಿಡುವಂತಹ ಪ್ರಶ್ನೆಯೊಂದನ್ನು ಕೇಳಲೆಂದು ಬಾಯಿತೆರೆಯುವಷ್ಟರಲ್ಲೇ ಅವಳು ಹತ್ತಬೇಕಾದ ಬಸ್ಸು ನಿಲ್ದಾಣವನ್ನು ಪ್ರವೇಶಿಸಿತು. ಬೈ ಹೇಳಿ ಬಸ್ಸು ಹತ್ತಿ ಹೋದವಳ ದಾರಿಯನ್ನೇ ನೋಡುತ್ತಾ ನಿಂತುಬಿಟ್ಟ ರಾಜೀವ್.

ಈ ಮಾತನ್ನವಳು ತನಗೆಂದೇ ಆಡಿದಳಾ?

ಅವಳು ಹಾಗೆ ಹೇಳುವಾಗ ತನ್ನನ್ನೇ ದಿಟ್ಟಿಸುತ್ತಿದ್ದ, ಅವರ್ಣನೀಯ ಭಾವಗಳು ತುಂಬಿದ್ದ ಅವಳ ಕಣ್ಣುಗಳ ಚಿತ್ರ 'ಹೌದು' ಎನ್ನುವ ಪುರಾವೆಯಂತೆ ಅವನೆದುರು ಮೂಡಿನಿಂತಿತು.

★★★

''ಬೋರ್‌ವೆಲ್ ತೋಡಿಸಲೇಬೇಕು.''

ಆಚೆಕಡೆ ಫೋನಿನಲ್ಲಿ ಅಪ್ಪ ತುಸು ಗಂಭೀರವಾಗಿಯೇ ಹೇಳಿದರು.

ರಾಜೀವನಿಗೂ ಗೊತ್ತಿತ್ತು. ಇದ್ದ ಒಂದೆಕರೆ ಗದ್ದೆ ಕಳೆದೆರಡು ವರ್ಷಗಳಿಂದ ಏನನ್ನೂ ಬೆಳೆಯದೇ ಹಾಳುಬಿದ್ದಿದೆ. ತನ್ನ ಕೆಲಸದ ಹೊರತಾಗಿ ತಮಗಿರುವ ಏಕ ಮಾತ್ರ ತುತ್ತಿನ ಪಾತ್ರೆಯದು. ನಾಳೆ ತಾನೇನಾದರೂ ಈ ಇಷ್ಟವಿಲ್ಲದ ಪಟ್ಟಣವನ್ನು ಬಿಟ್ಟು ಹೋದದ್ದೇ ಆದರೆ ಬದುಕುವುದಕ್ಕಾಗಿ ಆ ಪಾತ್ರೆಗೇ ಕೈಹಾಕಬೇಕಾಗುತ್ತದೆ. ಹಾಗಾಗಿ ಅದನ್ನು ಬಾಡಲು ಬಿಡುವ ಪ್ರಶ್ನೆಯೇ ಇಲ್ಲ. ಗದ್ದೆಯಾಚೆಗಿನ ಹಳ್ಳ ಡಿಸೆಂಬರ್ ವೇಳೆಗೇ ಹರಿಯುವುದನ್ನು ನಿಲ್ಲಿಸಿಬಿಡುತ್ತದೆ. ಹಾಗಾಗಿ ಬೋರ್‌ವೆಲ್ ತೋಡಿಸಲೇಬೇಕು.

''ಸರಿ. ನೀವು ಮುಂದುವರೆಸಿ. ಹಣ ನಾನು ಹೊಂದಿಸುತ್ತೇನೆ.''

ಅಷ್ಟಂದು ಫೋನಿಟ್ಟವನ ತಲೆಯೊಳಗೆ ನೂರು ಚಿಂತೆಯ ಹಕ್ಕಿಗಳು ಮೊಟ್ಟೆಯಿಡತೊಡಗಿದವು. ಒಂದು ಬೋರ್‌ವೆಲ್‌ಗೆ ಹತ್ತಿರ ಹತ್ತಿರ ಒಂದು ಲಕ್ಷವಾದರೂ ಬೇಕು. ಅದು ಒಂದಕ್ಕೆ. ಹಾಗಂತ ಮೊದಲ ಪ್ರಯತ್ನದಲ್ಲೇ ನೀರು ಸಿಗುತ್ತದೆಯೆಂಬುದಕ್ಕೆ ಯಾವುದೇ ಖಾತ್ರಿಯಿಲ್ಲ. ಕಷ್ಟಪಟ್ಟು ದುಡಿದ ಎಷ್ಟು ಸಾವಿರಗಳನ್ನು ನೀರಿಲ್ಲದ ಕೊಳವೆಗಳಿಗೆ ಎಸೆಯಬೇಕೋ? ತಾನೀಗ ಮತ್ತಷ್ಟು ಸಾಲಕ್ಕೆ ಬೀಳಲಿದ್ದೇನೆನ್ನುವುದಷ್ಟೇ ಸದ್ಯಕ್ಕೆ ಖಾತ್ರಿಯಿರುವ ಏಕಮಾತ್ರ ಸಂಗತಿ.

ಯಾರನ್ನು ಕೇಳುವುದು? ಗೆಳೆಯರ್ಯಾರೂ ಅಷ್ಟೆಲ್ಲ ಸಾಲ ಕೊಡುವಷ್ಟು ಸ್ಥಿತಿವಂತರಲ್ಲ. ಸ್ಥಿತಿವಂತರಾಗಿರುವವರ್ಯಾರೂ ಅಷ್ಟು ಸಾಲ ಕೊಡುವಷ್ಟು ಆತ್ಮೀಯರಲ್ಲ. ಭಾವನನ್ನು ಕೇಳೋಣವೆಂದರೆ, ''ಅಪ್ಪ ಮಾಡಿದ ಸಾಲವನ್ನು ತೀರಿಸುತ್ತೀಯೆಂದುಕೊಂಡರೆ ನೀನೇ ಒಂದು ಹೊಸ ಖಾತೆ ತೆರೆಯುತ್ತಿದ್ದೀಯಲ್ಲಾ'' ಎಂದು ಕುಹುಕವಾಡುತ್ತಾರೆ. ಕಂಪನಿಯಲ್ಲಿ ಉದ್ಯೋಗಿಗಳಿಗೆ ಸಾಲಕೊಡುವುದನ್ನು ನಿಲ್ಲಿಸಿ ವರ್ಷವಾಗಿದೆ. ಇನ್ನು ಫೈನಾನ್ಸ್ ಕಂಪನಿಗಳ ಬಾಗಿಲಿಗೋ, ಇಲ್ಲಾ ಬ್ಯಾಂಕುಗಳ ಕೌಂಟರ್‌ಗೋ ಎಡತಾಕೋಣವೆಂದರೆ ಅವರು ಹೊರಿಸುವ ಬಡ್ಡಿಯನ್ನು ತಾಳುವುದು ತನ್ನಿಂದ ಸಾಧ್ಯವಿಲ್ಲ.

ತಾನು ಹೊದ್ದಿರುವುದು ಚಾದರವನ್ನೋ ಅಲ್ಲಾ ಚಿಂತೆಗಳನ್ನೋ ಎಂಬಂತೆ ರಾಜೀವ ನಿದ್ರೆ ಬರದೆ ಹೊಡಕಾಡಿದ. ಯಾಕೋ ಮೊದಲ ಬಾರಿಗೆ ಪಟ್ಟಣದ ಬಸ್ಸು ಹತ್ತಿದಾಗಿನ ದಿನಗಳು ನೆನಪಾದವು. ಸಂಬಳ ಹತ್ತು ಸಾವಿರ ಸಿಕ್ಕರೂ ಸಾಕು, ರಾಜಾರಾಜವರ್ಮನಂತೆ ಬದುಕಿಬಿಡುತ್ತೇನೆಂದು ನಂಬಿದ್ದ ದಿನಗಳವು. ಇಷ್ಟು ದಿನ ಅಪ್ಪ ಕೊಡುತ್ತಿದ್ದ ಹಣದಲ್ಲಿ ಬದುಕುತ್ತಿದ್ದ ಲೆಕ್ಕಾಚಾರದ ಬದುಕು ಇನ್ನೇನು